ಬಿಡುಗಡೆ ಮಾಡಬೇಕೆಂದು ಹೇಳಿ ಇವತ್ತು ಈ ರಾಜ್ಯಪಾಲ ಭಾಷಣ ಬಹುಶಃ ಮುಂದಿನ ವರ್ಷದಲ್ಲಾದರೂ ಕೂಡ ನಮಗೆ ಒಂದು ಯೋಗ್ಯ ಮಾರ್ಗದರ್ಶನವಾಗಲಿ. ತಮ್ಮ ಸರ್ಕಾರದಿಂದ ಜನರಿಗೆ ಅನುಕೂಲವಾಗುವ ದೃಷ್ಟಿಯಿಂದ ತಾವು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿ ಈ ರಾಜ್ಯಪಾಲರ ಭಾಷಣವನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನನಗೆ ಮಾತನಾಡಲು ಅನುವು ಮಾಡಿಕೊಟ್ಟಿದ್ದಕ್ಕೆ ತಮಗೆ ವಂದನೆಗಳು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮೊನ್ನೆ ಗ್ರಾನೈಟ್ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಆ ಕಡತಗಳನ್ನು ಅಧ್ಯಕ್ಷರ ಕೊಠಡಿಯಲ್ಲಿ ನೋಡಬೇಕು ಎಂದು ನಿರ್ಣಯ ಆಗಿತ್ತು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಈಗ ರೆಕಾರ್ಡ್ಸ್ ನೋಡಿದ್ದಾಗಿದೆ. ಅದರಲ್ಲಿ ಯಾವುದನ್ನೂ ಕಂಡುಹಿಡಿಯಲಿಕ್ಕಾಗಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದನ್ನೆಲ್ಲಾ ವಿಚಾರ ಮಾಡಿದ ಮೇಲೆ ಒಂದು ಕನ್‌ಕ್ಲೂಷನ್ ಏನು ಬಂದಿತು ಎಂದರೆ ಇದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ರೆಫರ್ ಮಾಡಬೇಕು ಎನ್ನುವಂತಹ ವಿಚಾರಕ್ಕೆ ಬರಲಾಯಿತು. ಅದಕ್ಕೆ ಅವರೂ ಸಹ ಒಪ್ಪಿಕೊಂಡಿದ್ದಾರೆ.

ಉಪಾಧ್ಯಕ್ಷರು: ಅವರು ಅದಕ್ಕೆ ಒಪ್ಪಿಕೊಂಡಿಲ್ಲ ಎಂದು ಹೇಳುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಲ್ಲ, ಎಲ್ಲರೂ ಕೂಡಿಯೇ ಆ ನಿರ್ಣಯ ಮಾಡಿದ್ದೆ. ಅದಕ್ಕಾಗಿ ದಯಮಾಡಿ ಅದರ ಮೇಲೆ ಅವರು ಹೇಳಿಕೆ ಕೊಡಬೇಕು. ಇನ್ನು ಎರಡನೆಯದಾಗಿ ಸೇಡಂ ತಾಲ್ಲೂಕಿನಲ್ಲಿ ಸಬ್ ಇನ್‌ಸ್ಪೆಕ್ಟರ್ ಮಾಡಿರುವಂತಹ ಒಂದು ಕೊಲೆಯ ಬಗ್ಗೆ ಕೂಡ ಇವತ್ತು ಸಾಯಂಕಾಲ ಸ್ಟೇಟ್‌ಮೆಂಟ್ ಕೊಡಿಸುತ್ತೇವೆ ಎಂದಿರಿ. ಅದನ್ನೂ ಕೂಡ ಕೊಡಿಸಲಿಲ್ಲ. ಆದುದರಿಂದ ಆ ಎರಡು ವಿಚಾರಗಳ ಬಗ್ಗೆ ಸಚಿವರಿಂದ ಹೇಳಿಕೆ ಕೊಡಿಸಬೇಕು.

(9) ಸಚಿವರಿಂದ ಹೇಳಿಕೆ

ವಿಷಯ: ಕೊಪ್ಪಳದ ಗ್ರಾನೈಟ್ ಕ್ವಾರಿ ಬಗ್ಗೆ ಹಾಗೂ ಗುಲ್ಬರ್ಗಾ ಜಿಲ್ಲೆಯ ಸೇಡಂನಲ್ಲಿ ದಲಿತ ಯುವಕನ ಸಾವಿನ ಬಗ್ಗೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗ ಸಚಿವರು): ಮಾನ್ಯ ಅಧ್ಯಕ್ಷರೆ, ಆ ಬಗ್ಗೆ ಸ್ಟೇಟ್‌ಮೆಂಟ್ ಕೊಡುತ್ತೇನೆ. ನಿನ್ನೆ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿರುವಂತೆ ಕೊಪ್ಪಳ ತಾಲ್ಲೂಕಿನ ಪ್ರದೇಶದ ಗ್ರಾನೈಟ್ ಕ್ವಾರಿಯನ್ನು ಲೀಸ್‌ಗೆ ಕೊಡತಕ್ಕಂಥ ವಿಚಾರದಲ್ಲಿ ಸ್ವತಃ

ಮುಖ್ಯಮಂತ್ರಿಗಳು ಕಛೇರಿಯಲ್ಲಿರುವಂತಹ ಕಡತವನ್ನು ತೋರಿಸಲಿಕ್ಕೂ ಸರ್ಕಾರ ತಯಾರಿದೆ ಎನ್ನುವಂತಹ ಮಾತನ್ನು ಸದನದಲ್ಲಿ ಸರ್ಕಾರದ ಪರವಾಗಿ ನಾವು ಹೇಳಿದ್ದೇವೆ.

5.40 ಪಿ.ಎಂ

ಮುಖ್ಯಮಂತ್ರಿಗಳ ಕಛೇರಿಯಲ್ಲಿರತಕ್ಕಂಥ ಕಡತಗಳನ್ನು ಎಲ್ಲವನ್ನೂ ಸಹಿತ ನಾವು ತೋರಿಸಿದ್ದೇವೆ. ಅದರ ಜೊತೆಗೆ ನಾನು ಏನು ಹೇಳಿದ್ದೆ ಅಂದರೆ, ಸರಕಾರ ಈ ಸಂಬಂಧದಲ್ಲಿ ಯಾವುದೇ ಆಜ್ಞೆಯನ್ನು ಮಾಡಿಲ್ಲ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳಿದ್ದೆ. ನನಗೆ ಗೌರವಾನ್ವಿತ ಮಾನ್ಯ ಸದಸ್ಯರು ಕೂನೆಗೂ ನಾನು ಹೇಳಿರತಕ್ಕಂಥಾದ್ದನ್ನು ಒಪ್ಪಿಕೊಂಡಿದ್ದಾರೆ- ಎಂಬುದು ಸಂತೋಷವಾಗಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾನ್ಯ ಸಚಿವರು ಮಿಸ್‌ಗೈಡ್ ಮಾಡುತ್ತಿದ್ದಾರೆ...

ಉಪಾಧ್ಯಕ್ಷರು: ಅವರು ತಮ್ಮ ಮಾತುಗಳನ್ನು ಮುಗಿಸಲಿ....

ಶ್ರೀ ಪಿ.ಜಿ.ಆರ್.ಸಿಂಧ್ಯ: ಇದು ಆದಮೇಲೆ ಸರಕಾರಕ್ಕೆ ಏನು ರೆಕಮೆಂಡ್ ಮಾಡಿದ್ದಾರೆ, ಹೀಗೆ ರೆಕಮೆಂಡ್ ಮಾಡಿರತಕ್ಕಂಥ ವಿಚಾರದಲ್ಲಿ 1-1-98ಗೆ ಏನು ಮೀಟಿಂಗ್ ಆಗಿದೆ, ಅದರಲ್ಲಿ ಕೆಲವು ಪ್ರೊಸೀಜರ್ ಎರರ್ಸ್ ಇದೆ, ಅದಕ್ಕೋಸ್ಕರವಾಗಿ ಅದನ್ನು ಕಳುಹಿಸಿರತಕ್ಕಂಥಾದ್ದು ಕಾನೂನು ಬದ್ಧವಾಗಿ, ಅರಣ್ಯ ಇಲಾಖಾ ಕಾನೂನು, ರೆವಿನ್ಯೂ ಇಲಾಖೆಯ ಕಾನೂನುಗಳೇನಿವೆ ಅದರ ಪ್ರಕಾರವಾಗಿ ಅಧಿಕಾರಿಗಳು ಕೆಲಸ ಮಾಡಿದ್ದಾರೋ ಇಲ್ಲವೋ ಎನ್ನುವುದರ ಒಂದು ವಿಚಾರವನ್ನು ಪರಿಶೀಲನೆ ಮಾಡಬೇಕೆನ್ನುವುದರ ಸಲುವಾಗಿ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ರೆಫರ್ ಮಾಡಬೇಕೆಂದಾಯಿತು. ಪಬ್ಲಿಕ್ ಅಕೌಂಟ್ಸ್ ಕಮಿಟಿಯು ಇರತಕ್ಕಂಥಾದ್ದೇ ಇಂಥ ಕೆಲಸಕಾರ್ಯಗಳನ್ನು ಪರಿಶೀಲಿಸಲು. ಅದಕ್ಕೋಸ್ಕರ ನಮ್ಮ ಸತ್‌ಸಂಪ್ರದಾಯವು ವಿರೋಧ ಪಕ್ಷದ ನಾಯಕರನ್ನು ಅಧ್ಯಕ್ಷರನ್ನಾಗಿ ಮಾಡುವುದು ವಿಧಾನಮಂಡಲವು ಅನುಸರಿಸಿಕೊಂಡು ಬಂದ ಪದ್ಧತಿ. ಹೀಗೆ ಈ ವಿಚಾರವನ್ನು ಕಮಿಟಿಗೆ ರೆಫರ್ ಮಾಡಿದ್ದನ್ನು ಅವರೂ ಕೂಡ ಒಪ್ಪಿಕೊಂಡಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷಪೀಠದಿಂದ ನಮಗೆ ಸಹಕಾರವನ್ನು ಕೊಟ್ಟಿದ್ದಾರೆ. ಅವರಿಗೂ ನಮಗೂ ಕರೆಸಿ ಮಾತನಾಡಿದ್ದಾರೆ. ನಮ್ಮ ಸರಕಾರ ಎಷ್ಟೊಂದು ಪಾರದರ್ಶಕವಾಗಿದೆ ಎಂಬುದಕ್ಕೆ ಇದೊಂದು ಉದಾಹರಣೆ. ಯಾವ ಸಂದರ್ಭದಲ್ಲಿಯೂ ಕೂಡ ಇವರೆಲ್ಲಾ ಇಷ್ಟೆಲ್ಲಾ ಮಾಡಿದರೂ ಸಹಿತ ಅದಕ್ಕೆ ಕಾಸ್ ಆಫ್ ಆಕ್ಷನ್ ಇರಲಿಲ್ಲ. ಆದರೂ ಕೂಡ ನಾವು ತೋರಿಸಿದ್ದೇವೆ. ನಮ್ಮ ಅಧಿಕಾರಿಗಳು ಯಾವುದೇ ತಪ್ಪನ್ನು ಮಾಡಿಲ್ಲ.

ಶ್ರೀ ಹೆಚ್.ಡಿ.ಬಸವರಾಜು: ನೀವು ಪಾರದರ್ಶಕತ್ವ ಎಂದು ಹೇಳಿದ್ದೀರಲ್ಲಾ ಅದನ್ನು

ಮಾಡಲು ಸದನದಲ್ಲಿ ಒಂದೂವರೆ ಗಂಟೆಗಳ ಕಾಲ ಚರ್ಚೆಯಾಯಿತು. ಅದನ್ನು ನಾವು ಇಲ್ಲಿ ಗಂಭೀರವಾಗಿ ಗಮನಿಸಬೇಕು.

ಉಪಾಧ್ಯಕ್ಷರು: ವಿರೋಧಪಕ್ಷದ ನಾಯಕರು ಏನು ಹೇಳುತ್ತಾರೆ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಇದನ್ನು ನಾವೆಲ್ಲರೂ ಕೂಡ ದೀರ್ಘಕಾಲ ಚರ್ಚಿಸಿದ್ದೇವೆ. ಕಾಗೋಡು ತಿಮ್ಮಪ್ಪನವರು, ಜಯಚಂದ್ರರವರು, ಯಡಿಯೂರಪ್ಪನವರು, ಪ್ರಮೀಳಾರವರು, ಡಾ॥ ಕರ್ಕಿಯವರು ಮುಂತಾಗಿ ಎಲ್ಲರೂ ಕೂಡ ಆ ರೆಕಾರ್ಡ್ಸ್‌ನ್ನು ನೋಡತಕ್ಕಂಥಾದ್ದಕ್ಕೆ ಅಲ್ಲಿಗೆ ಹೋದರು. ಕೆಲಸವನ್ನು ಪರಿಶೀಲನೆ ಮಾಡಿದ್ದಾರೆ. ಆದರೆ ಅದರಲ್ಲಿ ಸ್ವಲ್ಪ ವ್ಯತ್ಯಾಸಗಳು ಏನೆಂದರೆ, ಕಾನೂನಿನ ಪ್ರಕಾರ ಏನು ಕ್ರಮವನ್ನು ಜರುಗಿಸಬೇಕಾಗಿತ್ತು, ಅದು ಮೈನ್ಸ್ ಅಂಡ್ ಜಿಯಾಲಜಿ ಆಕ್ಟ್‌ನ ಪ್ರಕಾರ.... ಅವರು ಜಿ.ಓ ಇಶ್ಯೂ ಆಗಿಲ್ಲ ಎಂದು ಹೇಳಿದ್ದಾರಲ್ಲಾ.... ಅದನ್ನು ಬಿಟ್ಟು ನಾನು ಬೇರೆ ಯಾವುದನ್ನೂ ರೆಫರ್ ಮಾಡುತ್ತಿಲ್ಲ....

ಉಪಾಧ್ಯಕ್ಷರು: ಈಗ ಒಮ್ಮೆ ರೆಫರ್ ಮಾಡಿದ ಮೇಲೆ ಪುನಃ ಚರ್ಚೆ ಮಾಡುವ ಅವಶ್ಯಕತೆ ಏನಿದೆ? ಅವುಗಳೆಲ್ಲಾ ವಿಚಾರ ಮಾಡುವುದಕ್ಕಾಗಿ ಬರುತ್ತವೆ. ಆಗ ಪರಾಮರ್ಶೆ ಮಾಡಿ. ಅದನ್ನು ಅವರು ಕೂಡ ಒಪ್ಪಿಕೊಂಡಿದ್ದಾರೆ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಒಪ್ಪಿಕೊಂಡಿದ್ದಾರೆ ಎಂದು ಏನು ಹೇಳುತ್ತಿದ್ದಾರೆ ಅದು ಸತ್ಯಕ್ಕೆ ದೂರವಾದ ಮಾತು. ಅದರಲ್ಲಿ ಇರತಕ್ಕಂಥಾದ್ದು ಏನು ಅಂದರೆ,....

ಶ್ರೀ ಪಿ.ಜಿ.ಆರ್.ಸಿಂಧ್ಯ: ಅದರಲ್ಲಿ ಕಾಸ್ ಆಫ್ ಆಕ್ಷನ್ ಇಲ್ಲವಾದರೂ ಕೂಡ ನಾವು ಒಪ್ಪಿಕೊಂಡಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಅಲ್ಲಿ ಸರಕಾರದ ಯಾವ ಪಾತ್ರವೂ ಇಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ರಿಪೋರ್ಟ್ ಬರಲಿ. ಅದನ್ನು ಬಿಟ್ಟು ನಮ್ಮದ್ದೇನೂ ತಪ್ಪಿಲ್ಲ ಎಂದು ಹೇಳುತ್ತಾರೆ; ಅಂದರೆ ಹೇಗೆ?

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರು ತಮ್ಮ ಪೀಠದಿಂದ ಇದೆಲ್ಲವನ್ನೂ ನೋಡಿದ್ದಾರೆ. ಸ್ಪೆಸಿಫಿಕ್ ಆಗಿ ಹೇಳಿದ್ದಾರೆ. ಇದೊಂದು ಡಿಟೈಲ್ ಮ್ಯಾಟರ್. ಸುಮ್ಮನೆ ಸರಕಾರದಿಂದ ಒಂದು ಹೈಪವರ್ ಕಮಿಟಿಗೆ ರೆಕಮೆಂಡ್ ಮಾಡಿ ಕಳುಹಿಸಿದ್ದರು. ಆದರೆ ಸರಕಾರ ಒಪ್ಪಿಯೇ ಇಲ್ಲ. ಒಪ್ಪುವುದಕ್ಕೆ ಮುಂಚೆಯೇ ಇಷ್ಟೆಲ್ಲಾ ನಡೆಯಿತು ಎಂಬುದನ್ನು ತಮ್ಮ ಗಮನಕ್ಕೆ ತರಲು ಹೇಳಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು: ಈಗ ನೀವೂ ಅವರೂ ಕೂಡಿ ಒಂದು ನಿರ್ಧಾರಕ್ಕೆ ಒಪ್ಪಿಕೊಂಡಮೇಲೆ ಪುನಃ ಚರ್ಚೆ ಯಾಕಾಗಿ ಮಾಡುತ್ತೀರಿ?

ಶ್ರೀ ಕೆ.ಎಸ್.ಈಶ್ವರಪ್ಪ: ಅಧ್ಯಕ್ಷರೇ, ನಾವು ಹೇಳಿದ್ದಕ್ಕೆ ಅವರು ಒಪ್ಪಿಲ್ಲ. ಸದನಸಮಿತಿ ಮಾಡಿ ಎಂದುದಕ್ಕೆ ಅವರು ಒಪ್ಪಿಲ್ಲ. ವಿಧಿ ಇಲ್ಲದೆ ಪಿ.ಎ.ಸಿಗೆ ರೆಫರ್ ಮಾಡಿದ್ದೇವೆಂದು ಹೇಳಿದ್ದಾರೆ. ಅದನ್ನು ನಾವು ಒಪ್ಪಿಲ್ಲ. ರಿಕಾರ್ಡ್ಸ್ ಸ್ಪಷ್ಟವಾಗಿ ಇರಲಿ.

ಉಪಾಧ್ಯಕ್ಷರು: ಈಗಾಗಲೇ ಈ ವಿಚಾರವನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಒಪ್ಪಿಸಿರುವುದರಿಂದ ಪುನಃ ಇಲ್ಲಿ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಸದನವನ್ನು ಈಗ ಮುಂದೂಡುತ್ತಿದ್ದೇನೆ. ಸದನವು ಪುನಃ ನಾಳೆ ಬೆಳಿಗ್ಗೆ 10.00 ಘಂಟೆಗೆ ಸೇರುತ್ತದೆ

(ಸದನವು ಸಂಜೆ. 5.40 ಗಂಟೆಗೆ ಮುಂದೂಡಲ್ಪಟ್ಟಿತು ಮತ್ತೆ 13.3.98ರಂದು ಬೆಳಿಗ್ಗೆ 10 ಘಂಟೆಗೆ ಸೇರಲು ನಿಶ್ಚಯಿಸಲಾಯಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

Printed by : The Director, Printing, Stationery and Publications, Government Press, Bangalore-1